## ಕಥೆ

ವಿಲಾಸದಲ್ಲೇ ಸುಖಿಸುತ್ತಿದ್ದ. ಆ ಅತ್ತೆಯರು ಅವನ ತಂದೆಗೆ ಸಂಬಂಧಗಳಿಂದ ಸುತ್ತಿ ಬಳಸಿ ತಂಗಿಯರಾಗಿದ್ದರು. ಅವರು ದಾರಿ ತಪ್ಪುವ ಮೊದಲೇ ಜನ ಅವರು ಸೂಳೆಯರು ಎಂದು ಪ್ರಚಾರ ಮಾಡಿದ್ದರು. ಯಾವ ಗಂಡುಗಳೂ ಮದುವೆಗೆ ಒಪ್ಪಿರಲಿಲ್ಲ. ಮುದಿ ಗಡವಗಳು ಜೊತೆಗೆ ಇಟ್ಟುಕೊಳ್ಳುತ್ತೇವೆ ಎಂದಿದ್ದರು. ಅಂತವರ ಎದೆಗೆ ಒದ್ದಂತೆ ಜಾಡಿಸಿ ಮಾತಾಡಿ ತೊಲಗು ಎಂದು ಬೈಯ್ದು ಕಳಿಸಿದ್ದರು. ಊರ ಆ ಗೊಡ್ಡುಗಳು ಆ ಮೂವರ ಜೊತೆಗೂ ತಮಗೆ ಸಂಬಂಧ ಇದೆ ಎಂದು ಊರ ಮುಂದೆ ನಾತ ಬಾಯಿಂದ ಡಂಗೂರ ಸಾರಿದ್ದರು. ಅವರು ತಲೆ ಕೆಡಿಸಿಕೊಂಡಿರಲಿಲ್ಲ. ಹೌದೇ ಎಂದು ಅದೇ ಊರ ಮಾರಿಗುಡಿ ಮುಂದೆ, 'ಕಂಡೆಯಾ ಮಾರವ್ವಾ' ಎಂದು ಗಹ ಗಹಿಸಿ ನಕ್ಕುಬಿಟ್ಟಿದ್ದರು.

ಅವರು ಚೆಂದುಳ್ಳ ಚೆಲುವೆಯರು. ಬಡವರ ಮಕ್ಕಳು ಸುಂದರಿಯರಾದರೆ ಕಂಡವರಿಗೆಲ್ಲ ಸಡಗರವಂತೆ. ಸಾಲಾಗಿ ಎದೆಮಟ್ಟ ಬೆಳೆದಿದ್ದರು. ಟೆಂಟಿನ ಸಿನಿಮಾಗಳಿಗೆ ಹೋಗುತ್ತಿದ್ದರು. ಪೀಡಿಸಿ ಕಾಮುಕರು ಕಾಡುತ್ತಿದ್ದರು. ಕಾಲು ಜಾರುತ್ತಿರಲಿಲ್ಲ. 'ನಮ್ಮ ತೋಟದ ಕೂಲಿಗೆ ಬನ್ನಿ' ಎಂದು ಗೌಡರೇ ಕೇರಿಗೆ ಬಂದು ಗೋಗರೆದು ಕರೆಯುತ್ತಿದ್ದರು. ಅವರವ್ವ ಸಿದ್ದವ್ವ ರಣಕಾಟಿ ಹೆಂಗಸು. ತನ್ನ ಹೆಣ್ಣು ಮಕ್ಕಳ ಸದಾ ಕಾಯುತ್ತಿದ್ದಳು. ಕಾದು ಕಾದು ಸುಸ್ತಾಗಿ, 'ಅಯ್ಯೋ ಭಗವಂತಾ; ಅನ್ನಾಯಕಾರಾ; ನನ್ನ ಹೆಣ್ಣು ಮಕ್ಕಳಿಗೆ ಕಾಟಕೊಡೋರು ನಿನ್ನ ಕಣ್ಣಿಗೆ ಕಾಣೋದಿಲ್ಲವೇನೊ' ಎಂದು ದೇವರಿಗೇ ಬೈಯುತ್ತಿದ್ದಳು. ರಾತ್ರಿ ವೇಳೆ ಪುಂಡರು ಬಾಗಿಲು ಬಡಿಯುತ್ತಿದ್ದರು. ಕಾದಿದ್ದು ಅಂತವರಿಗೆ ಪೊರಕೆಯಲ್ಲಿ ಬಡಿದಿದ್ದಳು. ತಾಯಿ ಈ ಪರಿ ಕಾದಿದ್ದು ಕಾದಾಡುವುದ ಕಂಡು ಅವಳ ಹೆಣ್ಣು ಮಕ್ಕಳು ಕಲಕಲ ನಗುತ್ತಿದ್ದರು. ಒಂದು ದಿನ ಹಾಗೇ ಆಕೆ ಎದೆ ನೋವೆಂದು ಕುಸಿದು ಪ್ರಾಣ ಬಿಟ್ಟಿದ್ದಳು. ಆಗಲೂ ಆ ಪಾಪಿಗಳು ಉಪಕಾರ ಮಾಡುವ ನೆಪದಲ್ಲಿ ಬಂದು ಆ ಹೆಣ್ಣು ಮಕ್ಕಳ ಮೈ ಮುಟ್ಟಿ ನಾವಿದ್ದೇವೆ ಎಂದು ಸಲಿಗೆಗೆ ಕರೆಯುತ್ತಿದ್ದರು. ಆ ಚೆಲುವೆಯರು ತಾಯಿ ತೀರಿ ಹೋದ ಮೇಲೆ ನಗುವುದನ್ನು ಬದಲಿಸಿಕೊಂಡಿದ್ದರು. ಅವರು ನಕ್ಕರೆ ಒಂದು ಕಾಲಕ್ಕೆ ಮುತ್ತುಗಳು ಉದುರುತ್ತಿದ್ದವು. ಈಗ ನಕ್ಕರೆ ಯಾರೊ ದೀನವಾಗಿ ರೋದಿಸುವಂತೆ ಕೇಳಿಸುತ್ತಿತ್ತು. 'ಅತ್ತೇ ನೀನ್ಯಾಕೆ ಅಳುವಂತೆ ನಗುವೆ'ಎಂದು ಆ ಹುಡುಗ ಗಾಬರಿಯಿಂದ ಕೇಳುತ್ತಿದ್ದ. ಅತ್ತೆಯರು ಸುಮ್ಮನೆ ನಗುತ್ತಿದ್ದರು. ಆತನಿಗೆ ಭಯವಾಗುತಿತ್ತು. ಅವರು ಅಳುತ್ತಿದ್ದಾರೊ ನಗುತ್ತಿದ್ದಾರೊ ಎಂಬುದೇ ಗೊಂದಲವಾಗುತ್ತಿತ್ತು. ತಡರಾತ್ರಿತನಕ ಅಂಗಳದಲ್ಲಿ ಮಲಗಿ ಆಕಾಶದ ನಕ್ಷತ್ರಗಳ ಜೊತೆ ಮಾತಾಡಿ ನಗುತ್ತಿದ್ದರು. ಅವರ ಮಗ್ಗುಲಲ್ಲಿ ಮಲಗಿ ಅತ್ತೆಯರ ಹಿತವಾದ ಬೆಚ್ಚನೆಯ ಕಿಬ್ಬೊಟ್ಟೆಗೆ ಒತ್ತಿಕೊಂಡು ಬೆಚ್ಚಗೆ ಮಲಗುವುದೆಂದರೆ ಅವನಿಗೆ ಏನೋ ಸುಖ. ತಾಯ ಸ್ಪರ್ಶವನ್ನು ಆತ ಆ ಅತ್ತೆಯರಲ್ಲಿ ಕಂಡಿದ್ದ. ಕಾಡಿನ ನಟ್ಟ ನಡುವೆ ನೀರಾಟ ಆಡುವ ತಬ್ಬಲಿ ಚೆಲುವೆಯ ಕಿನ್ನರ ಪುರುಷ ಬಂದು ಮೆಚ್ಚಿ ಕುದುರೆ ಮೇಲೆ ಕೂರಿಸಿಕೊಂಡು ಹಾರಿ ಹೋಗುವ ಕಥೆಗಳ ಹೇಳುತ್ತಿದ್ದಂತೆ ಆ ಅತ್ತೆಯರೇ ಹಾರಿ ಹೋದಂತೆ ಆತ ಕನಸು ಕಾಣುತ್ತಿದ್ದ. 'ಅಯ್ಯೋ ಅತ್ತೆಯರೇ ನಾನೂ ಬರುವೆ ನಿಲ್ಲೀ... ಹಾರಿ ಹೋಗಬೇಡಿ... ಬಿಟ್ಟು ಹೋಗದಿರಿ... ನನಗಾರುಗತಿ; ನೀವೇ ನನ್ನ ಆಸರೆ' ಎಂದು ಕೂಗುತ್ತಿದ್ದ. ಅವನ ತಾಯಿ ಹುಚ್ಚಿಯಾಗಿ ಸಂತೆಮಾಳದಲ್ಲಿ ಸಾವಿರದ ನೂರು ಒಂದು ಗಂಟುಗಳ ಸೀರೆ ಬಟ್ಟೆಯಲ್ಲಿ ಕಟ್ಟಿಕೊಂಡು ಮಾರಿಗುಡಿಯ ಮುಂದಿನ ಅರಳಿ ಮರದ ಕೆಳಗೆ ಕೂತೇ ಇರುತ್ತಿದ್ದಳು. ಮಾರಿ ಗುಡಿಯ ಬಳಿಯೇ ಶಾಲೆ. ಹುಚ್ಚಿ ಎಂದು ಹುಡುಗರು ಕಲ್ಲು ಎಸೆದು ರೇಗಿಸುತ್ತಿದ್ದರು. ಆಕೆ ತನ್ನ ತಾಯಿ ಎಂದು ಆತ ಹೇಳಿಕೊಳ್ಳುತ್ತಿರಲಿಲ್ಲ. ಇವನು ತನ್ನ ಮಗ ಎಂಬುದನ್ನೇ ಆ ಹುಚ್ಚಿ ತಾಯಿ ಮರೆತಿದ್ದಳು. ಕಲ್ಲು ತೂರಬೇಡಿ ಎಂದು ಹೈಕಳ ಮೇಲೆ ಜಗಳಕ್ಕೆ ಹೋಗುತ್ತಿದ್ದ. ಹುಚ್ಚಿ ಮಗ ಎಂದು ಹಂಗಿಸುತ್ತಿದ್ದರು. ಮಧ್ಯಾಹ್ನದ ಬಿಸಿಯೂಟದ ಉಪ್ಪಿಟ್ಟು ನೀಡುವವರೆಂದು ತಟ್ಟೆ ಹಿಡಿದು ನಿಂತೇ ಇರುತ್ತಿದ್ದ ತಾಯಿಗೆ ಅವನೇ ಹೋಗಿ ಕೊಡುತ್ತಿದ್ದ. ಮನಸ್ಸು, ಕರುಳೂ ಮರೆತಿದ್ದರೂ ಭಾವದ ಸೆಳೆತಕ್ಕೆ ಏನೊ ನೆನಪಿನ ಕೊಂಡಿ ಇರುತ್ತದೆ. ಆ ಮಗನನ್ನು ಆಕೆ ಹುಚ್ಚಿಯಾದರೂ ಕಣ್ಣು ಕಿರಿದು ಮಾಡಿಕೊಂಡು; ಇವನನ್ನು ಎಲ್ಲೊ ನೋಡಿರುವೆ ಎಂಬಂತೆ ದಿಟ್ಟಿಸುತ್ತಲೇ ಇದ್ದಳು. 'ಲೋ; ಹುಚ್ಚಿ ನಿನ್ನನ್ನೆ ನೋಡ್ತಿದ್ದಾಳೆ ಅತ್ತ ಹೋಗೊ; ಇಲ್ಲದಿದ್ದರೆ ಕತ್ತು ಮುರಿದುಬಿಡುತ್ತಾಳೆ' ಎಂದು ಹೆದರಿಸುತ್ತಿದ್ದರು. 'ಇವತ್ತು ಹೀಗಾಯಿತು ಅತ್ತೇ'ಎಂದು ಹಿರಿ ಅತ್ತೆಯ ಜೊತೆ ಕಂಬನಿ ತುಳುಕುವ ಕಣ್ಣಲ್ಲಿ ಆತ ಆದದ್ದನ್ನೆಲ್ಲ ಹೇಳಿ ಅತ್ತುಬಿಡುತ್ತಿದ್ದ. ನಾಳೆ ಸಂತೆಗೆ ಹೋಗಿ ಬಂದು ನಿನಗೆ ಒಂದು ಬಣ್ಣದ ಬುಗುರಿ ತಂದು ಕೊಡುವೆ ಎಂದು ಮಾತಿಗೆ ತಪ್ಪದೆ ನಡೆದುಕೊಳ್ಳುತ್ತಿದ್ದರು.